# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1046 (988) |
| ಸದಸ್ಯರ ಹೆಸರು | : | ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು |
| ಉತ್ತರಿಸುವ ದಿನಾಂಕ | : | 29.09.2020 |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ "ಇನ್ವೆಸ್ಟ್ ಕರ್ನಾಟಕ" ನಡೆದಿರುವುದು ನಿಜವೇ;</td><td>ಹೌದು.</td></tr>
<tr><td>ಆ</td><td>ಹಾಗಿದ್ದಲ್ಲಿ, ಈ ಸಮಾವೇಶದಲ್ಲಿ ಆದಂತಹ ಒಪ್ಪಂದಗಳು ಯಾವುವು;</td><td rowspan="2">2000, 2010, 2012 ಹಾಗೂ 2016 ರಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ/ ಇನ್ವೆಸ್ಟ್ ಕರ್ನಾಟಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸದರಿ ಸಮಾವೇಶಗಳಲ್ಲಿ ಆದಂತಹ ಒಪ್ಪಂದಗಳು/ ಹೂಡಿಕೆಯ ಮೊತ್ತ/ ಉದ್ಯೋಗ ಸೃಜನೆಯ ವಿವರಗಳು ಕೆಳಕಂಡಂತಿವೆ.
<table>
<tr><th>ಸಮಾವೇಶ</th><th>ಒಡಂಬಡಿಕೆ/ ಅನುಮೋದನೆಯಾದ ಯೋಜನೆಗಳ ವಿವರ</th><th>ಬಂಡವಾಳ ಹೂಡಿಕೆ (ರೂ.ಕೋಟಿಯಲ್ಲಿ)</th><th>ಉದ್ಯೋಗ ಸೃಜನೆ</th></tr>
<tr><td>2000 ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ (5 ಮತ್ತು 8 ಜೂನ್ 2000)</td><td>254</td><td>27160.00</td><td>98965</td></tr>
<tr><td>2010 ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ (4 ಮತ್ತು 5 ಜೂನ್ 2010)</td><td>389</td><td>392768.00</td><td>735292</td></tr>
<tr><td>2012 ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ (7 ಮತ್ತು 8 ಜೂನ್ 2012)</td><td>751</td><td>677068.00</td><td>1527687</td></tr>
<tr><td>2016 ಇನ್ವೆಸ್ಟ್ ಕರ್ನಾಟಕ ಸಮಾವೇಶ (3,4 ಮತ್ತು 5 ಫೆಬ್ರವರಿ 2016)</td><td>1202</td><td>305584</td><td>652018</td></tr>
</table>
</td></tr>
<tr><td>ಇ</td><td>ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಿಂದ ಎಷ್ಟು ಬಂಡವಾಳವನ್ನು ಹೂಡಿಕೆ ಮಾಡಲು ಉದ್ದೇಶಿಸಿದ್ದಾರೆ; ಇದರಿಂದ ದೊರೆಯುವಂತಹ ಉದ್ಯೋಗಾವಕಾಶಗಳು ಎಷ್ಟು; (ವಲಯವಾರು ಮಾಹಿತಿ ನೀಡುವುದು)</td></tr>
</table>

| | | |
|---|---|---|
| ಈ | ರಾಜ್ಯದಲ್ಲಿ ಇನ್ವೆಸ್ಟ್ ಕರ್ನಾಟಕ ಮುಖಾಂತರ ರಾಜ್ಯದಲ್ಲಿ ನೂತನವಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರವನ್ನು ನೀಡುವುದು) | ಇತ್ತೀಚೆಗೆ ದಿನಾಂಕ 20 ರಿಂದ 24ನೇ ಜನವರಿ 2020 ರಲ್ಲಿ ಸ್ವಿಡ್ಜರ್‌ಲ್ಯಾಂಡ್‌ನ ದಾವೂಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ಶೃಂಗಸಭೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಿಯೋಗವು ಭಾಗವಹಿಸಿ, ಸುಮಾರು 40 ವಿಶ್ವದ ಪ್ರಮುಖ ಕೈಗಾರಿಕೋದ್ಯಮಿಗಳೊಂದಿಗೆ ಸಭೆ ನಡೆಸಿ, ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಮಾಡಲು ಆಹ್ವಾನಿಸಲಾಗಿದೆ. ದಿನಾಂಕ 14.02.2020 ರಲ್ಲಿ ಇನ್ವೆಸ್ಟ್ ಕರ್ನಾಟಕ – ಹುಬ್ಬಳ್ಳಿ ಸಮಾವೇಶವನ್ನು ಆಯೋಜಿಸಿ ಒಟ್ಟು 54 ಕೈಗಾರಿಕೆಗಳೊಂದಿಗೆ ಬಂಡವಾಳ ಹೂಡಿಕೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಇವುಗಳಿಂದ ರಾಜ್ಯದಲ್ಲಿ ರೂ.73,714.31 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, 90,507 ಜನರಿಗೆ ಉದ್ಯೋಗಾವಕಾಶಗಳು ಸೃಜನೆಯಾಗಲಿವೆ.<br><br>ಮುಂದುವರೆದು, ಬಂಡವಾಳ ಹೂಡಿಕೆದಾರರ ಸಮಾವೇಶದ ಹಿನ್ನೆಲೆಯಲ್ಲಿ ಡಿಸೆಂಬರ್ 23–2019 ರಂದು ಮುಂಬೈನಲ್ಲಿ ಮತ್ತು ಡಿಸೆಂಬರ್ 29–2019 ರಲ್ಲಿ ಹೈದರಾಬಾದ್‌ನಲ್ಲಿ ರೋಡ್ ಶೋಗಳನ್ನು ನಡೆಸಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲಾಗುತ್ತಿದೆ.<br><br>ಇದಲ್ಲದೆ, ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಸರ್ಕಾರವು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>• ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ ಸಹಾಯಧನ ಮತ್ತು ರಿಯಾಯಿತಿಗಳನ್ನು ನೀಡುವ ಬಗ್ಗೆ ಕೈಗಾರಿಕಾ ನೀತಿ 2020–25 ನ್ನು ಹೊರತರಲಾಗಿದೆ.<br>• ದೇಶ ವಿದೇಶಗಳ ಹಲವಾರು ಪ್ರತಿಷ್ಠಿತ ಕಂಪನಿಗಳೊಂದಿಗೆ ಕರ್ನಾಟಕದಲ್ಲಿ ಬಂಡವಾಳ ಹೂಡಲು ಸಭೆಗಳನ್ನು ಮಾನ್ಯ ಕೈಗಾರಿಕಾ ಸಚಿವರ / ಪ್ರಧಾನ ಕಾರ್ಯದರ್ಶಿಗಳ, ಕೈಗಾರಿಕಾಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಸರಣಿ ಸಭೆಗಳನ್ನು ನಡೆಸಲಾಗುತ್ತಿದೆ.<br>• ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಭೂಮಿ ಖರೀದಿ ಪ್ರಕ್ರಿಯೆ ಸರಳೀಕರಣಗೊಳಿಸಲಾಗಿದೆ.<br>• ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಎನ್.ಓ.ಸಿ ಗಳನ್ನು ಪಡೆಯಲು 3 ವರ್ಷಗಳವರೆಗೆ ಸಮಯವನ್ನು ವಿಸ್ತರಿಸಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ 2002ಕ್ಕೆ ತಿದುಪಡಿ ತರಲಾಗಿದೆ.<br>• ಕೈಗಾರಿಕೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಕಾರ್ಮಿಕ ಕಾನೂನನ್ನು ಸರಳೀಕರಣಗೊಳಿಸಲಾಗಿದೆ.<br><br>ಕೈಗಾರಿಕೆಗಳನ್ನು ಶೀಘ್ರವಾಗಿ ಅಡೆತಡೆಗಳಿಲ್ಲದೆ, ಪ್ರಾರಂಭಿಸಲು ಈಸ್ ಆಫ್ ಡೂಯಿಂಗ್ ಬಿಸಿನೆಸ್ ಜಾರಿಗೊಳಿಸಲಾಗಿದೆ. |

ಸಿಐ 265 ಎಸ್‌ಪಿಐ 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು